MR. SPEAKER.—I am extremely sorry for the conduct of certain Members. If the Members were to conduct like this, the Chair will live only for 5 years instead of 10 years.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಹೇಳಿದ್ದಕ್ಕೆ ನನ್ನ ಬೆಂಬಲವಿದೆ. ನಾವು ನಿಯಮಾವಳಿಯ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಆದಕಾರಣ ತಾವು ಕೈಮುಗಿದು ಕೇಳಿಕೊಳ್ಳುತ್ತೇನೆ ಎಂದು ಹೇಳುವುದನ್ನು ನಾನೂ ಸಹ ಒಪ್ಪುವುದಿಲ್ಲ ಈ ಸಭೆಯನ್ನು ನಡೆಸಲು ನಾವು ನಿಮಗೆ ಕಾನೂನು ಪ್ರಕಾರ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ. ನೀತಿನಿಯಮಾವಳಿಗಳ ಪ್ರಕಾರ ಈ ಸಭೆಯ ಕಾರ್ಯಕಲಾಪಗಳು ಸ್ವಚ್ಛವಾಗಿ ನಡೆಯಬೇಕೆಂಬ ದೃಷ್ಟಿಯಿಂದ ನಿಮಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದೇವೆ. ಆದಕಾರಣ ತಾವು ಸದಸ್ಯರನ್ನು ಬೇಡಿಕೊಳ್ಳುವ ಪ್ರಸಂಗವೇ ಇಲ್ಲ. ಮತ್ತು ಆ ಒಂದು ಭಾವನೆ ತಮಗೆ ಇರಬೇಕಾಗಿಲ್ಲ. ಜೊತೆಗೆ ಮಾನ್ಯ ಸದಸ್ಯರಿಗೂ ಸಹ ತಮ್ಮನ್ನು ಈ ಒಂದು ಮಟ್ಟಕ್ಕೆ ತರಬೇಕೆಂಬ ಭಾವನೆ ಏನೂ ಇರುವುದಿಲ್ಲ. ಆದರೆ ಕೆಲವು ಮುಖ್ಯ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಆ ರೀತಿ ಎದ್ದು ನಿಲ್ಲುತ್ತಾರೆ. ಅಷ್ಟೇ ಹೊರತು, ತಮಗೆ ಸಹಕಾರ ಕೊಡಬಾರದೆಂಬ ಭಾವನೆ ಯಾರಿಗೂ ಇರುವುದಿಲ್ಲ.

MR. SPEAKER.—What is the control of the Government Whip, on the ruling party members? If the Members were to go on having a dialogue with the Chair the Chair will be helpless

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಮುಖ್ಯಸಚೇತಕರು ಸದಸ್ಯರನ್ನು ಕಂಟ್ರೋಲ್ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ನಮ್ಮ ಉಪ-ಮುಖ್ಯಸಚೇತಕರು ಹೋಗಿ ಹೇಳಿ ಬಂದಿದ್ದಾರೆ.

Statement by Minister

re : Flood relief measures under taken and Planned for the affected persons.

† ಶ್ರೀ ಎಸ್. ಬಂಗಾರಪ್ಪ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಅತಿವೃಷ್ಟಿಯಿಂದಾಗಿ ಆಗಿರತಕ್ಕಂಥ ಅನಾಹುತದ ಬಗ್ಗೆ ಈ ಸದನದ ಎಲ್ಲಾ ಮಾನ್ಯ ಸದಸ್ಯರೂ ಅವರವರ ಕಳವಳವನ್ನು ವ್ಯಕ್ತಪಡಿಸಿ ಮತ್ತು ಅವರವರ ಅಭಿಪ್ರಾಯವನ್ನು ಹಿಂದೆ ವ್ಯಕ್ತಪಡಿಸಿದಂಥ ಸಂದರ್ಭದಲ್ಲಿ ಸರ್ಕಾರದ ಪರವಾಗಿ ನಾನು ಹೇಳಿಕೆಯನ್ನು ಕೊಟ್ಟು ಇನ್ನೂ ಹೆಚ್ಚಿನ ವಿವರಗಳನ್ನು ಈ ಸದನದ ಮುಂದೆ ಇಡುತ್ತೇನೆ ಎಂದು ಹೇಳಿದ್ದೆನು. ಕೆಲವು ಜನ ಮಾನ್ಯಮಂತ್ರಿಗಳನ್ನು ಆಯಾ ಜಿಲ್ಲೆಗಳಿಗೆ ಈಗಾಗಲೇ ಕಳಿಸಿಕೊಡಲಾಗಿದ್ದು, ಶಾಸಕರೂ ಕೂಡ ಅಲ್ಲಿಗೆ ಹೋಗಿ ನೋಡಿಕೊಂಡು ಬರುವುದಕ್ಕೆ ನಾವು ವ್ಯವಸ್ಥೆಯನ್ನು ಮಾಡಿದ್ದೇವೆ. ಶಾಸಕರೂ ಕೂಡ ಆಯಾ ಕ್ಷೇತ್ರಗಳಿಗೆ ಹೋಗಿ ಅತಿವೃಷ್ಟಿಯಿಂದಾದ ಅನಾಹುತವನ್ನು ಕಣ್ಣಾರೆ ಕಂಡು ಬಂದಿದ್ದಾರೆ. ಶ್ರೀಮಾನ್ ಪಾವಷೆಯವರು ಮತ್ತು ಇನ್ನಿತರ ಕೆಲವು ಸದಸ್ಯರು ಈಗಾಗಲೇ ಹೋಗಿ ನೋಡಿಕೊಂಡು ಬಂದಿದ್ದಾರೆ. ಅಲ್ಲದೇ ಶಿವಮೊಗ್ಗ, ಕಾರವಾರ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ಈಗಾಗಲೇ ಈ ಬಗ್ಗೆ ಪತ್ರಗಳು ಬಂದಿವೆ ಇದರಲ್ಲಿ ಅವರೆಲ್ಲರೂ ಎಷ್ಟು ಎಕರೆಯಷ್ಟು ಬೆಳೆಗೆ ಹಾನಿಯಾಗಿದೆ, ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾನು ಈ ಹಿಂದೆಯೇ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಯಾರ್ಯಾರಿಗೆ ಯಾವ್ಯಾವ ರೀತಿ ಅನ್ಯಾಯವಾಗಿದೆ, ಏನು ತೊಂದರೆ ಆಗಿದೆ, ನಷ್ಟ ಎಷ್ಟು ಆಗಿದೆ ಎಂಬ ಬಗ್ಗೆ ಮತ್ತಷ್ಟು ವಿವರಗಳನ್ನು ಕಲೆಕ್ಟ್ ಮಾಡಿ ಮತ್ತೆ ಈ ಮಾನ್ಯ ಸಭೆಗೆ ಒಂದು ವರದಿಯನ್ನು ಕೊಡತಕ್ಕಂಥ ಮಾತನ್ನು ನಾನು ಹೇಳಿದ್ದೆ. ಆ ಬಗ್ಗೆ ಈಗ ಒಂದು ಹೇಳಿಕೆಯನ್ನು ಕೊಡುತ್ತಿದ್ದೇನೆ. ಈ ಹೇಳಿಕೆಯನ್ನು ಕೊಟ್ಟಮೇಲೂ ಇದು ಪೂರ್ಣವಾಗುವುದಿಲ್ಲ. ಮತ್ತೆ ಹೇಳಿಕೆಯನ್ನು ಕೊಡಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ಕೆಲವು ಹಳ್ಳಿಗಳಲ್ಲಿ ಇನ್ನೂ ನೀರು ತುಂಬಿದೆ ಮತ್ತು ಭೂಮಿಯೆಲ್ಲಾ ನೀರಿನಿಂದ ಆವೃತ್ತವಾಗಿದೆ. ನೀರು ಇನ್ನೂ ಕಡಿಮೆಯಾಗಿಲ್ಲ. ನಾನು ೯ನೇ ತಾರೀಖಿನ ದಿವಸ ಕಾರವಾರ ಮತ್ತು ಶಿವಮೊಗ್ಗದ ಕಡೆಗಳಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಮತ್ತೆ ೧೩ನೇ ತಾರೀಖು ವಾಪಸ್ಸು ಬಂದಿದ್ದೇನೆ. ಇನ್ನೂ

† Indicates that remarks or speeches have not been revised by the member concerned.

ಸಾವಿರಾರು ಎಕರೆಯಷ್ಟು ಭೂಮಿ ನೀರಿನಲ್ಲೇ ಇದೆ. ದಕ್ಷಿಣ ಕನ್ನಡ ಜಿಲ್ಲೆಗೆ ಶ್ರೀಮಾನ್ ವೀರಪ್ಪ ಮೊಯಿಲಿಯವರು ಹೋಗಿ ಬಂದಿದ್ದಾರೆ. ಕೊಡಗು ಜಿಲ್ಲೆಗೆ ತಾವೆಲ್ಲಾ ಹೋಗಿ ಬಂದಿದ್ದೀರಿ. ನಮ್ಮ ಸ್ನೇಹಿತರಾದ ಬೇಗಾನೇ ರಾಮಯ್ಯನವರು ಧಾರವಾಡ ಮತ್ತು ಚಿಕ್ಕಮಗಳೂರಿಗೆ ಹೋಗಿಬಂದಿದ್ದಾರೆ. ಶ್ರೀಮತಿ ಮನೋರಮಾ ಮದ್ವರಾಜ್ ಅವರು ಕಾರವಾರ ಜಿಲ್ಲೆಗೆ ಹೋಗಿ ಬಂದಿದ್ದಾರೆ. ಮತ್ತು ಶ್ರೀಮತಿ ರೇಣುಕಾ ರಾಜೇಂದ್ರನ್‌ಅವರು ಮೈಸೂರು ಜಿಲ್ಲೆಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ನಮ್ಮ ರೆವಿನ್ಯೂ ಕಮೀಷನರ್‌ರವರು ಕೂಡ ಮೈಸೂರು ಜಿಲ್ಲೆಯ ಕೆಲವು ಭಾಗಗಳಿಗೆ ಹೋಗಿಬಂದಿದ್ದಾರೆ. ಈ ಒಂದು ಕಾರ್ಯಕ್ರಮವನ್ನು ಸಾರ್ವಜನಿಕರೂ ಸಹ ಮೆಚ್ಚಿದ್ದಾರೆ. ಎಲ್ಲಾ ಇಲಾಖೆಯ ಅಧಿಕಾರಿಗಳೂ ಸಹ ಇದರಲ್ಲಿ ಒಟ್ಟಾಗಿ ಸೇರಿ ಈ ವಿಷಯದಲ್ಲಿ ಕೆಲಸ ಮಾಡಿದ್ದಾರೆ. ದೊಡ್ಡ ಪ್ರಮಾಣ ದಲ್ಲಿ ಪ್ರವಾಹ ಬಂದು ಅನಾಹುತವಾಗಿರತಕ್ಕಂಥ ಪ್ರದೇಶಗಳಿಗೂ ಕೂಡ ಅಧಿಕಾರಿಗಳು ಹೋಗಿ ಲೋಪದೋಷಗಳನ್ನು ಸರಿಪಡಿಸತಕ್ಕಂಥಾದರಲ್ಲಿ ಬಹಳ ಜವಾಬ್ದಾರಿಯಿಂದ ಕೆಲಸ ಮಾಡಿದ್ದಾರೆ. ಒಂದು ವೇಳೆ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಲಿಲ್ಲ ಎಂದರೆ ಅವರು ಯಾವ್ಯಾವ ಅಧಿಕಾರಿಗಳು ಕೆಲಸ ಮಾಡಲಿಲ್ಲ ಎಂಬ ಬಗ್ಗೆ ವಿಚಾರವನ್ನು ನನ್ನ ಗಮನಕ್ಕೆ ತಂದರೆ ಅವರಮೇಲೆ ನಾನು ಕ್ರಮ ತೆಗೆದು ಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ. ಈ ಬಗ್ಗೆ ಇಲ್ಲಿಯವರೆಗೆ ನನಗೆ ಬಂದಿರತಕ್ಕಂಥ ವರದಿಯ ಆಧಾರದ ಮೇಲೆ ನನ್ನ ಹೇಳಿಕೆಯನ್ನು ಕೊಡುತ್ತೇನೆ. ಏಕೆಂದರೆ ಇನ್ನೂ ಕೂಡ ಅಸೆಸ್‌ಮೆಂಟ್ ಆಗಬೇಕಾಗಿದೆ. ನೀರು ಸಂಪೂರ್ಣವಾಗಿ ಇಳಿದಮೇಲೆ ಆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡುವುದಕ್ಕೆ ಸಾಧ್ಯವಿದೆ ಎನ್ನತಕ್ಕಂಥ ಮಾತಿನ ಹಿನ್ನಲೆಯಲ್ಲಿ ನಾನು ಹೇಳುತ್ತಿದ್ದೇನೆ. ನಾನು ಫ್ಲಡ್ ಏಫೆಕ್ಟೆಡ್ ಏರಿಯಾ ವಿಷಯದಲ್ಲಿ ಮಾತ್ರ ಹೇಳುತ್ತಿದ್ದೇನೆ. ಎಲ್ಲೆಲ್ಲಿ ಮಳೆಯಿಂದ ಅನಾಹುತವಾಗಿದೆ ಅದರ ಬಗ್ಗೆ ಪ್ರತ್ಯೇಕ ವಾಗಿ ಹೇಳಬೇಕಾಗಿದೆ ಅದು ಪುತ್ತೂರು ಇರಬಹುದು ಮತ್ತು ಕೋಲಾರ ಇರಬಹುದು. ಇನ್ನು ಗುಲ್ಬರ್ಗ ಬೀದರ್ ಮತ್ತು ಇನ್ನಿತರ ಕಡೆಗಳಲ್ಲಿ ಆಗಿರುವ ಅನಾಹುತದ ಬಗ್ಗೆ ನಾನು ಹೇಳಿಕೆ ಕೊಡು ವುದನ್ನು ಮರೆಯುವುದಿಲ್ಲ ನಾನು ಹಿಂದೆ ಈ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದೆ. ಅದನ್ನು ಈಗ ಕೊಟ್ಟುಬಿಡುತ್ತೇನೆ.

SRI B. BASAVALINGAPPA.—I would suggest to the Hon'ble Minister for Revenue to distribute the copies of statement instead of readi the same since most of us have already gone through the statement.

ಶ್ರೀ ಎಸ್. ಬಂಗಾರಪ್ಪ.— ನೀವು ಸ್ಟೇಟ್‌ಮೆಂಟನ್ನು ಇಲ್ಲಿ ಓದುವುದು ಬೇಡ ಎಂದರೆ ಅದೂ ಸಂತೋಷ, ಅಥವಾ ಇಲ್ಲಿ ಸ್ಟೇಟ್‌ಮೆಂಟನ್ನು ಓದಬೇಕು ಎಂದರೆ ಅದೂ ಬಹಳ ಸಂತೋಷ.

ಶ್ರೀ ಬಿ ವಿ. ಕಕ್ಕಿಲಾಯ.—ಅದನ್ನು ಇಲ್ಲಿ ಓದಿದರೆ ಒಳ್ಳೆಯದು.

ಅಧ್ಯಕ್ಷರು.—ಅದನ್ನು ಓದಿಬಿಡಿ.

SRI S. BANGARAPPA.—Mr. Speaker, I wish to make the following:—

The Hon'ble members are aware that I had assured on the last occasion when I had made a statement in regard to the damages caused by the floods in the different Districts of the State, that the details of nature and extent of damage will be got assessed and immediate relief measures taken in order to see that the flood affected victims are enabled to grow a normal crop during the current kharif season and are quickly rehabilitated. I had also promised that I would make a further statement during this session itself as to the actual relief measurs undertaken and planned in this behalf. I have accordingly come before the House to make this statement.

2. Members are aware that the rains ceased to pour heavily and she floods have started receding. But, after a brief spell, there were tome heavy showers in tbe coastal Districts and the Malnad parts of the State, as a result of which some of the rivers like Cauvery, Kabini, Varada, Malaprabha and Krishna were again in spate and some villages were surrounded by water and the agricultural fields on the

river banks came under water. Due to this inundation of the fields, there were further damages to the standing crops. In order to avoid burdening this statement with the details of the extent of damages, I have enclosed a separate tabular statement giving some broad figures about the nature and extent of damages caused due to both spells of the floods. I would like to add that some areas are still inaccesible and the actual assessment of the damage in such areas is still to be done. Actually, therefore, the process of assessment is still on, and final figures of damages, particularly to the agricultural crops could be known only after the assessment is finally completed.

3. As indicated by me while making the statement on this subject last time Ministers have toured the different affected areas, and facilities were also extended to the MLAs and MLCs desiring to tour the affected areas. Some of the members have also accordingly visited the different affected areas and have given their own assessments of the situation, with their suggestions for extending relief measures.

4. Apart from the damages caused to the P.W.D. and other roads in the affected Districts, as also the breaches and other damages to the minor irrigation tank works, the damages to the crops caused on account of the floods is three fold. Firstly, the direct damage due to inundation by floods, secondly, damages caused due to breaches of the tank bunds and thirdly the deterioration of crop condition due to continuous heavy rains. It is estimated on a provisional basis according to the available figures that in all an area of 23,830 hectares has been affected in these districts due to the floods. I wish herein to give details of the steps taken by the Government to extend relief to the affected farmers, so as to ensure that the current kharif season is not lost and in any case atleast one crop is grown by them during the current year, so as to mitigate their hardships.

(i) A provision of Rs. 100 lakhs has been made in the current years Budget under the head "289 Relief on account of Natural Calamities", of which Rs. 50 lakhs was available under the vote on account up-to the end of July 1980. The full amount asked for by the Deputy Commissioner of affected districts for immediate relief have been released to them out of the above sum.

(ii) Adequate stock of seeds and fertilisers are kept ready for making available to the needy farmers through the Seed Corporations, Seed Forms and Registered Seed Growers. These stocks cover paddy, ragi, groundnut and pulses.

(iii) A contingency plan has been drawn up and instructions issued to the officers of the Agriculture Department for encouraging taking up short duration varieties of paddy for resowing for the areas where the sowings already made have been washed away by the floods.

Similarly, arrangements are made to suppy paddy seedlings from nurseries in the transplantation areas. Further, where the standing crops are damaged or lost, arrangements for sowing alternate short duration crops like ragi, jawar, pulses and sunflowers have been made.

(iv) With a view to mitigate hardships to cultivators Government is considering the question of suspension or remission of land revenue for the current kharif seasons in the affected parts of the State, where no further crop can be taken during the season.

(v) Instructions have been issued to the Co-operatives and the Officers of the Co-operation Department to work in close liasion with the Deputy Commissioners and make available credit facilities promptly in respect of both A and B components. There is, however, a problem regarding defaulters who would not in the normal course be eligible to get fresh crop loans. Steps are being taken to grant special credit facilities irrespective of such defaultes of the previous loans. Such Special facilities will be extended only to small and marginal farmers. Precautions are being taken to ensure seeds, manures and credit facilities are supplied to the actual cultivators.

(vi) A crash programme for restoring the breached minor irrigation tanks so as to facilitate storage of adequate water in the tanks. The interest of agricultural production has also been thought of. Special funds are being made available for this purpose in the flood affected areas.

(vii) A programme for taking up immediate repairs to the Public Works Department and other roads damaged by the recent floods is also being taken up. Special letters of credit to the Public Works Department to take up these minor irrigation works and road works are being given for this purpose.

(viii) A comprehensive programme for shifting of the villages in the affected areas to new sites is being drawn up, and provision will be made for drinking water wells, roads and other amenities in such new sites.

5. Finally, I would like to assure the House that Government is continuing to keep a close watch on the post-flood situation in the affected parts, and are taking prompt and effective measures to rehabilitate the floods affected victims and to enable them to grow atleast one good crop in the remaining part of the year, so that the States Agricultural Economy is not adversly affected, and the cultivators also do not suffer. The State Government is also taking up with the Government of India. The question of extending special additional financial assistance to enable the State Government to take effective measures not only by way of temporary relief, but also from the point of view of long range measures.

CHART INDICATING THE DAMAGES TO PROPERTY/CROP/LOSS OF HUMAN LIFE/CATTLE ON ACCOUNT OF FLOODS IN THE STATE

Sl. No.	Name of the District	Taluk	Villages	Crops	Damages to Property	Loss of Human Life	Cattle
1	2	3	4	5	6	7	8
1	Hassan	Sakaleshpur	48		50 houses	One	...
		Belur	...	130 Hectares	68 huts	...	...
2	Shimoga	Sorab	25	2500 ,,	34 MI tanks 10 roads		...
		Sagar	8	1500 ,,	30 MI tanks	two	...
		Shikaripur	...	600 ,,	...	one	...
		Thirthahalli	...	1200 ,,	...	...	...
		Hosanagar	...	2200 ,,	...	...	...
3	Kodagu	Madikeri	...	181 ,,	One restaurant one shop one luggage room	two	...
		Virajpet	...	346 ,,	...	...	...
		Somwarpet	...	155 ,,	...	...	...
4	Chick-magalur	Mudigere	...	91 ,,	one mini dam one small bridge (in Kalasa)	...	...
		N. R. Pura	...	87 ,,	19 houses in Balehonnur	...	...
		Koppa	...	82 ,,	...	...	...
		Shringeri	...	100 ,,	...	...	...
		Chickmagalur	...	65 ,,	...	...	...
5	Mysore	T. Narasipur	...	580 ,,	19 houses	...	...
		Kollegal	8	1044 ,,	56 ,,	...	...
		Nanjangud	...	101 ,,	36 ,,	...	...
		Periapatna	...	933 ,,	20 ,,	...	...

6	Uttara Kannada	Karwar	...	...		one house	...	...
		Supa	3	...		...	...	...
		Mungod	...	...		5 Bhagyamandir houses	...	...
		Sirsi	...	200	,,	Roofing and side wall of	...	...
						the Mosque	...	...
						one house at Banavasi	...	...
						one house at Chipgi		
						one Janatha house		
						Prakara of madhukeshwar		
						Temple		
						Bridge at Banavasi		
		Kumta	8	80	,,	10 houses		
						120 houses (Partially)		
		Bhatkal	...	...	,,	one coconut tree	...	...
						8 temporary sheds		
		Honnavar	...	80	,,	3 houses	...	...
						41 houses (Partially)	...	...
		Ankola	19	80	,,	6 houses	...	...
						2 houses (Partially)	...	...
7	Dakshina Kannada	Bantwal	18	200	,,	4 thatched houses	...	...
						52 ,, (Partially)	...	...
						8 tiled houses	...	...
						8 ,, ,, (partially)	...	...
						67 coconut trees		
						34 arecanut trees		
		Coondapoor	10	150	,,	One fish curing tank at Kodi	...	...
						35 thatched houses		
						1 tiled house		
						10 cargo boats		
		Karkala	...	200	,,	...	...	...

1	2	3	4	5	6	7	8
		Mangalore	10	2000	,,	10 thatched houses one (death) 3 thatched houses (Partially) 5 tiled houses (Partially) 5 fish curing tanks 1 boat shed 1 hotel	...
		Puttur	5	16	,,	5 thatched houses 1 tiled house 3 thatched houses (Partially)	...
		Sullia	...	10	,,	...	...
		Belthangady	...	120	,,	...	...
		Udupi	1	750	,,	1 Thatched house 1 tiled house 437 cocoanut trees 18 fish curing tanks 15 houses 4 houses (Partially)	...
8	Dharwad	Savanur	...	806	,,	21 houses	...
		Hangal	...	3360	,,	one house	one
		Haveri	...	3395	,,	...	...
		Nargund	...	486	,,	...	...
		Hirekerur	...	142	,,	...	...
		Hubli	...	26	,,	...	...
		Mundargi	...	24	,,	...	...
9	Bijapur	Badami	...	...	,,	one house	...
10	Belgaum	...	...	...	,,	...	...

We have supplied along the statement, a chart indicating the damages to property, crop, loss of human life/cattle on account of floods. ಇದೆಲ್ಲಾ ಇದೆ, ಇದನ್ನೆಲ್ಲಾ ಓದಬೇಕಾದ ಅವಶ್ಯಕತೆ ಇರಲಾರದು, ಇಷ್ಟು ವಿಷಯಗಳನ್ನು ಸದನದ ಗಮನಕ್ಕೆ ತಂದಿದ್ದೇನೆ. ನಂತರ Post flood situation assessment ಅನ್ನು ಎಷ್ಟು ಅನ್ಯಾಯವಾಗಿದೆ ಎನ್ನುವ ಅಸೆಸ್‌ಮೆಂಟನ್ನೂ ಇನ್ನೂ ಅಧಿಕಾರಿಗಳು ಮಾಡುತ್ತಾ ಇದ್ದಾರೆ. ಆದುದರಿಂದ ಇದರ ಬಗ್ಗೆ ಸ್ಟೆಪ್ ತೆಗೆದುಕೊಂಡು I will keep the House informed. ಯಾವ ಯಾವ ಜಿಲ್ಲೆಯಲ್ಲಿ ಏನೇನಾಗಿದೆ ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡುತ್ತೇನೆ. ಎಲ್ಲೆಲ್ಲಿ ಎಷ್ಟೆಷ್ಟು ಡ್ಯಾಮೇಜಾಗಿದೆ ಎಂಬ ವಿಚಾರದಲ್ಲಿ ಶಾಸಕರನ್ನು ಪ್ರತ್ಯೇಕವಾಗಿ ಕರೆದು ಮಾತನಾಡಿ ಅವರು ಹೇಳುವುದನ್ನು ಕೇಳುವುದಕ್ಕೆ ಸಿದ್ಧವಾಗಿದ್ದೇನೆ.

MR. SPEAKER.—In the afternoon we will be having Demands on Revenue. The hon. members while offering their observations, they may, after the discussion and reply is over, seek clarification to save the time, since there is pressure of time. I request that this matter may be treated like that.

ಶ್ರೀ ಕೆ. ಬಿ. ಮಲ್ಲಪ್ಪ.—ನಮ್ಮ ತಾಲ್ಲೂಕಿನಲ್ಲಿ ಭಾರಿ ಎಫೆಕ್ಟಾಗಿದೆ. ತಮ್ಮ ಸ್ಟೇಟ್‌ಮೆಂಟಿನಲ್ಲಿ ಅದು ಬಿಟ್ಟು ಹೋಗಿದೆ. ಪೇಪರಿನಲ್ಲಿ ಕೂಡ ಬಂದಿದೆ, ತಹಸೀಲ್ದಾರರು ಪೇಪರಿಗೆ ಕೊಟ್ಟಿದ್ದಾರೆ. ಎಷ್ಟು ಮನೆಗಳು ಬಿದ್ದು ಹೋಗಿವೆ. ಎಷ್ಟು ನಷ್ಟವಾಗಿದೆ ಎಂದು ಪೇಪರಿನಲ್ಲಿ ಬಂದಿದೆ. ನಮ್ಮ ತಾಲ್ಲೂಕಿನಲ್ಲಿ ಬಹಳ ಕಷ್ಟವಿದೆ. ಆದ್ದರಿಂದ ದಯವಿಟ್ಟು ಸಹಾಯ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಇದು ಅಪೂರ್ಣ ವರದಿ ಎಂದು ಹೇಳಿದೆ. ಇನ್ನೂ ವರದಿ ಬರುತ್ತದೆ. ಮಂತ್ರಿ ಸದನಕ್ಕೆ ಕೊಡುತ್ತೇನೆ. ಆದ್ದರಿಂದ ಈ ಪ್ರಶ್ನೆ ಉದ್ಭವವಾಗುದಿಲ್ಲ. ಯಾರಾದರೂ ಸದಸ್ಯರು, ಅವರು ಶ್ರೀಮಾನ್ ಮಲ್ಲಪ್ಪನವರು ಇರಬಹುದು, ಇನ್ನೊಬ್ಬರು ಇರಬಹುದು ವಿಷಯ ಬಿಟ್ಟು ಹೋಗಿದೆ, ವರದಿ ಅಪೂರ್ಣ ಎಂದು ನೋಡುವುದು ಬೇಡ. ಮತ್ತೆ ವರದಿಗಳನ್ನು ತರಿಸುತ್ತಾ ಇದ್ದೇವೆ, ಅದರಲ್ಲಿ ತಮ್ಮದೂ ಸೇರುತ್ತದೆ.

ಶ್ರೀ ಆರ್. ಎಸ್. ಪಾಟೀಲ್.—ನಮ್ಮ ಜಿಲ್ಲೆಯ ಬಗ್ಗೆ ಕೂಡ ಹೇಳಿಕೆಯಲ್ಲಿ ವಿಚಾರವಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟನ್ನು ಓದುವಾಗ ಒಂದು ವಿಚಾರವನ್ನು ನಮೂದಿಸಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿ ತಾಲ್ಲೂಕಿನಲ್ಲಿ ಭಯಂಕರ ಸೀ ಎರೋಷನ್ ಇದೆ. ಉತ್ತರ ಕನ್ನಡ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭಯಂಕರ ಸೀ ಎರೋಷನ್ ಇದೆ. ಕೃಷ್ಣರಾಜ ಸಾಗರದಲ್ಲಿ ರೀಸರ್ಚ್ ಸ್ಟೇಷನ್ ಇದೆ. ಅವರು ಪರ್ಮನೆಂಟ್ ರಿಲೀಫ್ ಮೆಷರಿಗಾಗಿ ೫೦ ಕೋಟಿ ರೂಪಾಯಿಗಳು ಯೋಜನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡುತ್ತಾರೆಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಮಾಡುತ್ತಾರೆ ಎನ್ನುವುದನ್ನು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ. ಮಾನ್ಯ ಸದಸ್ಯರು ಸೀ ಎರೋಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಹೇಳಿಕೆಗಿಂತ ಮೊದಲು ಮಾಡಿದ ಹೇಳಿಕೆಯಲ್ಲಿ ಅದನ್ನು ಕವರಪ್ ಮಾಡಿದ್ದೇನೆ. ಏನೇನು ಡ್ಯಾಮೇಜಸ್ ಆಗಿದೆ ಎಂದು ಅಧಿಕಾರಿಗಳು ಅಸೆಸ್‌ಮೆಂಟ್ ಮಾಡುತ್ತಾ ಇದ್ದಾರೆ ; ಮಾಡಿದ ಮೇಲೆ ನೆಕ್ಸ್ಟ್ ಸ್ಟೇಟ್‌ಮೆಂಟಿನಲ್ಲಿ ಬರುತ್ತದೆ. ಆದಕ್ಕಾಗಿ ಈ ಸ್ಟೇಟ್‌ಮೆಂಟ್‌ನಲ್ಲಿ ಸೇರಿಸಿಲ್ಲ.

ಶ್ರೀ ಎಸ್. ಕರಿಬಸವನಗೌಡ.—ಮಾನ್ಯ ಕಂದಾಯ ಸಚಿವರು ಮಾಡಿದ ಹೇಳಿಕೆಯಲ್ಲಿ ಹಡಗಲಿ, ಹಗರಿಬೊಮ್ಮನ ಹಳ್ಳಿ ಬಗ್ಗೆ ಏನೂ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ. ಮಾನ್ಯ ಸದಸ್ಯರಾದ ಕರಿಬಸವನ ಗೌಡರೂ ಹೇಳಿದ್ದಾರೆ ಮಾನ್ಯ ಆರ್. ಎಸ್. ಪಾಟೀಲರೂ ಹೇಳಿದ್ದಾರೆ. ಇನ್ನೂ ವಿಷಯಗಳು ಬರುತ್ತಾ ಇರುವುದರಿಂದ ಫರ್ದರ್ ಹೇಳಿಕೆ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಆರ್. ಎಸ್. ಪಾಟೀಲ್.—ಹೇಳಿಕೆ ಕೊಡುವಾಗ ಮಾನ್ಯ ಮಂತ್ರಿಗಳು ಈ ಒಂದು ಭಾಗವನ್ನು ಮರೆಯುವುದಿಲ್ಲ ಎಂದು ಹೇಳಿದರು ಅದನ್ನು ಕೇಳಿ ಸಂತೋಷವಾಯಿತು. ವಿವಿಧ ಜಿಲ್ಲೆಗಳಿಗೆ ಆಯಾಯ ಮಂತ್ರಿಗಳು ಹೋಗಿ ಅಸೆಸ್‌ಮೆಂಟ್ ಮಾಡಿಕೊಂಡು ಬಂದಿದ್ದಾರೆಂದು ಹೇಳಿದಿರಿ. ತಾವು ಧಾರವಾಡ, ಶಿವಮೊಗ್ಗ, ಕಾರವಾರಕ್ಕೆ ಹೋಗಿ ಬಂದಿರಿ. ಮಾನ್ಯ ಆರ್ಥ ಮಂತ್ರಿಗಳಾದ ವೀರಪ್ಪ ಮೊಯ್ಲಿಯವರು ಮಂಗಳೂರಿಗೆ ಒಂದು ಕೋಟಿ ಬೇಕು ಎಂದು ಹೇಳಿದ್ದಾರೆ, ನೀವು ಒಂದು ಕೋಟಿ ಬೇಕು ಎಂದು ಹೇಳಿದಿರಿ. ಆದರೆ ನಮ್ಮ ಜಿಲ್ಲೆಗೆ ಯಾರೊಬ್ಬರೂ ಹೋಗಲಿಲ್ಲ. ಮಲಪ್ರಭ ತುಂಬಿ ಹರಿಯುತ್ತಾ ಇದೆ, ೫೦-೬೦ ಸಾವಿರ ಕ್ಯೂಸೆಕ್ಸ್ ನೀರು ಬಿಟ್ಟಿದ್ದಾರೆ. ಪ್ರತಿ ವರ್ಷ ಮಹಾಪೂರವನ್ನು ಎದುರಿಸಬೇಕಾಗಿ ಬಂದಿದೆ. ಆಲ್ಲಿ ಬಹಳಷ್ಟು ನಷ್ಟವಾಗಿದೆ. ಈ ಬಗ್ಗೆ ನಾನು ನಿಮ್ಮ ಅಧಿಕಾರಿಗಳಿಗೆ ಫೋನ್ ಮಾಡಿದೆ. ಆದರ ಬಗ್ಗೆ ತಮ್ಮ ಹೇಳಿಕೆಯಲ್ಲಿ ಒಂದು ಪದ ಇಲ್ಲ, ಮುಂದು ಬರುತ್ತದೆ ಎಂದು ಯಾವ ಆಸೆಯಿಂದ ಇರಬೇಕು. ಆನ್ ದಿ ಫ್ಲೋರ್ ಆಫ್ ದಿ ಹೌಸ್ ಸದಸ್ಯರು ಹೇಳಿದರೂ ಅವರ ಮಾತಿಗೆ ಮನ್ನಣೆ ಸಿಕ್ಕುವುದಿಲ್ಲ ಎಂಬ ಅಭಿಪ್ರಾಯ ಜನರಲ್ಲಿ ಮೂಡಿದರೆ, ಸರ್ಕಾರದ ಬಗ್ಗೆ ಗೌರವ ಎಲ್ಲಿ ಉಳಿಯುತ್ತದೆ ಎನ್ನುವಷ್ಟಕ್ಕೆ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಸೆಸ್‌ಮೆಂಟ್ ಇನ್ನೂ ಮಾಡಿಲ್ಲ, ಬರುತ್ತಾ ಇದೆ ಎಂದು ಹೇಳಿದ್ದರೆ ನಮ್ಮ ಮನಸ್ಸಿಗೆ ಸಮಾಧಾನವಾಗುತ್ತಿತ್ತು. ಬೆಳಗಾಮಿನ ಬಗ್ಗೆ ಒಂದು ಮಾತೂ ಹೇಳಿಲ್ಲ. ಎಲ್ಲಾ ಪ್ರಜೆಗಳು ಸುಖವಾಗಿದ್ದಾರೆ, ಹಸುಗಳು ಒಳ್ಳೆಯ ಹಾಲನ್ನು ಕರೆಯುತ್ತವೆ ಎಂದು ವರದಿಯಲ್ಲಿ ತಿಳಿಸಿದರೆ ಹೇಗೆ.

11-00 A.M.

† SRI P. A PAWASHE.—The Hon. Minister has stated the report is not complete. I want to know whether he has received any report especially with regard to Belgaum Taluk. As a result of floods Bellary nala several acres of standing paddy crops have been submerged and heavy loss is caused to the agriculturists. If the Hon. Minister has not received any report regarding this he must ask the concerned authorities to assess the damage caused to the paddy crops in the area and relief must be given to those who have suffered as a result of floods of Bellary Nala. Same is the case with Malaprabha floods, several acres of paddy lands and sugarcane crops in Khanapur Taluk have been damaged. Regarding that also if the Hon. Minister has not received any information he may kindly call for a report from the Officers concerned and see that relief is give to these agriculturists as early as possible.

SRI M. C. NANAIAH —May I draw the attention of the Hon. Ministers for Finance and Agriculture and Revenue to one point ? None other than the Finance Minister during his visit to South Kanara has made a statement that the Revenue Officers have under estimated the assessment of damages in several places. As far as Mangalore and Coorg Dists are concered the Officers concerned have not come forward with a correct picture. Hence in the light of the Statement of the Hon. Finance Minister, I request the Hon. Minister for Revenue to kindly see that the damages are assessed correctly by the Revenue Officers as they are underestimated and necessary action taken against erring officials. I have seen in Mercara 14 houses have collapsed, but even a reference has not been made in the report.

† ಶ್ರೀ ಎಸ್. ಬಂಗಾರಪ್ಪ.–ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಯಾರೂ ಮಂತ್ರಿಗಳವರು ಅಲ್ಲಿಗೆ ಹೋಗಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳಿದರು. ಆದರೆ ಶ್ರೀ ಜಕನೂರ್‌ರವರು ಅಲ್ಲಿಗೆ ಹೋಗಿದ್ದಾರೆ, ಅವರು ಅಲ್ಲಿಗೆ ಹೋಗಿ ಬಂದ ನಂತರ ಅವರಿಂದ ವರದಿಯನ್ನು ನಿರೀಕ್ಷಣೆ ಮಾಡುತ್ತಿದ್ದೇವೆ. ಎಲ್ಲಾ ಭಾಗಗಳಿಗೂ ಹೋಗಲು ಸಾಧ್ಯವಾಗದೇ ಇರುವುದರಿಂದ ಆ ವಿವರ ನನ್ನ ಹತ್ತಿರವಿಲ್ಲ. ಅದಕ್ಕೆ ಈಗಾಗಲೇ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಳ್ಳುತ್ತಿದ್ದೇವೆ ಮತ್ತು ಕೆಲವು ಮಂತ್ರಿಗಳೂ ಸಹ ಕೆಲವು ತಾಲ್ಲೂಕ್‌ಗಳಿಗೆ ಹೋಗಿ ಬಂದಿದ್ದಾರೆ, ಮತ್ತು ಶಾಸಕರುಗಳೂ ಸಹ ತಮ್ಮ ವರದಿಯನ್ನು ಕೊಡಲಿ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಶ್ರೀ ನಾನಯ್ಯನವರು ೧೪ ಮನೆಗಳು ಒಡೆದು ಹೋಗಿವೆಯೆಂದು ಹೇಳಿದರು, ಆದುದರಿಂದ ಅವರು ಕೊಟ್ಟಿರತಕ್ಕ ವರದಿಯ ಪ್ರಕಾರ ಮನೆಗಳು ಬಿದ್ದು ಹೋಗಿರಲೇ ಬೇಕು, ಅದೇ ರೀತಿ ಅಧಿಕಾರಿಗಳು ಕೊಟ್ಟ ವರದಿಯಲ್ಲಿ ಸಹ ಅದು ಇರಲೇ ಬೇಕಾಗುತ್ತದೆ. ಆದು ವರದಿಯಲ್ಲಿ ಬರಲೇ ಬೇಕು, ಆಕಸ್ಮಾತ್ ಒಂದೆರಡು ಮನೆಗಳು ಬಿದ್ದು ಹೋಗಿರುವುದು ಬಿಟ್ಟು ಹೋಗಿದ್ದರೆ ಸೇರಿಸೋಣ. ಆದುದರಿಂದ ತಮ್ಮ ಹತ್ತಿರ ಏನೇನು ಮಾಹಿತಿ ಇದೆಯೋ ಅದನ್ನು ಬರೆದು ಕಳುಹಿಸಿ ಕೊಡಿ. ಎಷ್ಟೆಷ್ಟು ಕಬ್ಬಿನ ತೋಟಗಳಿಗೆ ನೀರು ನುಗ್ಗಿದೆ ಎನ್ನತಕ್ಕ ಮಾತನ್ನೂ ಸಹ ಹೇಳಿದ್ದಾರೆ. ಹಾಗೆ ಅಂಡರ್ ಎಸ್ಟಿಮೇಟ್ ಮಾಡಲಾಗಿದೆಯೆಂದು ಹೇಳಿದರು. ಆದುದರಿಂದ ಅದನ್ನು ಸರಿಪಡಿಸಿ ಅಂಥವರಿಗೆ ಕಾಂಪೆನ್‌ಸೇಷನ್ ಕೊಡಬೇಕು ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದುದರಿಂದ ಈ ದಿವಸವೇ ಸರ್ಕಾರದ ಪರವಾಗಿ ಅಧಿಕಾರಿಗಳಿಗೆ ಆದೇಶ ಕಳುಹಿಸಿಕೊಡುತ್ತಿದ್ದೇನೆ. ಈ ರೀತಿ ಅಂಕಿ ಅಂಶಗಳನ್ನು ಕೊಡುವಾಗ ಸರಿಯಾದ ಅಂಕಿ ಅಂಶಗಳನ್ನು ಒದಗಿಸಬೇಕು ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಆದುದರಿಂದ ಇದನ್ನು ಇವತ್ತೇ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮತ್ತು ಕೆಳಗಿರತಕ್ಕ ಎಲ್ಲಾ ಅಧಿಕಾರಿಗಳಿಗೂ ಕಳುಹಿಸಿ ಸರಿಯಾದ ಅಂಕಿ ಅಂಶಗಳನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಆದರ ಬಗ್ಗೆ ಮಾನ್ಯ ಸದಸ್ಯರುಗಳು ಆತಂಕ ವ್ಯಕ್ತಪಡಿಸುವುದು ಬೇಡ. ಇಷ್ಟೆಲ್ಲಾ ಮಾಡಿದರೂ ಸಹ ಸ್ವಲ್ಪ ವ್ಯತ್ಯಾಸಗಳು ಬರಬಹುದು. ಎರಡು ಮನೆಗಳು ಬಿಟ್ಟು ಹೋಗಿವೆ ಇನ್ನೊಂದು ಕಡೆ ೧೦ ಎಕರೆ ಸೇರಿಸಿಲ್ಲ ಎನ್ನತಕ್ಕ ಮಾತು ಬರಬಹುದು. ಆಗ ಅದನ್ನು ಪರಿಶೀಲನೆ ಮಾಡಿಸಿ ಸೇರಿಸುವುದಕ್ಕೆ ಪ್ರಯತ್ನ ಮಾಡೋಣ ನಾನೂ ಸಹ ಪ್ರತಿಯೊಂದು ತಾಲ್ಲೂಕಿನಿಂದ ತಾಲ್ಲೂಕಿನಲ್ಲಿ ನೋಡುತ್ತಾ ಬಂದಿದ್ದೇನೆ, ಅಲ್ಲಿರುವ ಅಧಿಕಾರಿಗಳು ಪ್ರತಿಯೊಂದು ಸರ್ವೆ ನಂಬರ್ ಪ್ರಕಾರ ಎಷ್ಟು ಎಕರೆ, ಎಷ್ಟು ಭಾಗವಾಯ್ತು ಎಂಬುದನ್ನು ಸರ್ವೆ ಮಾಡಿಕೊಳ್ಳುತ್ತಾ ಬರುತ್ತಿದ್ದಾರೆ. ಆದರೆ ಆ ಕೆಲಸ ಇನ್ನು ಕೆಲವು ಕಡೆ ಪೂರ್ತಿಯಾಗಿಲ್ಲ. ಆದುದರಿಂದ ಮಾನ್ಯ ಸದಸ್ಯರ ಹತ್ತಿರ ಏನೂ ಮಾಹಿತಿ ಇದೆಯೋ ಅದೆಲ್ಲವನ್ನೂ ಬರೆದು ಕಳುಹಿಸಿ ಕೊಡಿ. ಇನ್ನು ಪರಿಹಾರವನ್ನು ಕೊಡತಕ್ಕದರ ಬಗ್ಗೆ ಹೇಳಿದ್ದೇನೆ. ಕ್ರಾಪ್ಸ್ ತೆಗೆಯುವುದಕ್ಕೆ ತತ್‌ಕ್ಷಣವೇ ಏನು ಸಲಕರಣೆಗಳು ಬೇಕೋ ಅದನ್ನು ವ್ಯವಸ್ಥೆ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಕೆಲವು ಸದಸ್ಯರು ಗೊಬ್ಬರದ ವಿಚಾರವನ್ನು ಹೇಳಿದ್ದಾರೆ ಅದಕ್ಕೆ ನಾನು ಕೆಲವು ಕಡೆಗಳಲ್ಲಿ ಹೋದಾಗ ಸ್ವಾಮಿ, ನಾವು ಬೀಜದ ವ್ಯವಸ್ಥೆಯನ್ನು ಹೇಗೋ ಮಾಡಿಕೊಳ್ಳುತ್ತೇವೆ ದಯವಿಟ್ಟು ಗೊಬ್ಬರದ ವ್ಯವಸ್ಥೆಯನ್ನು ಮತ್ತು ಕ್ರೆಡಿಟ್ ಫೆಸಿಲಿಟೀಸನ್ನು ತಕ್ಷಣವೇ ಒದಗಿಸಿ ಕೊಡಬೇಕೆಂದು ಕೇಳಿದ್ದಾರೆ. ಆದನ್ನು ಆದಷ್ಟು ಬೇಗ ಒದಗಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಮಲಪ್ರಭಾ ಪ್ರದೇಶ, ಗುಲ್ಬರ್ಗ, ಬಿಜಾಪುರ, ಬೀದರ್ ವಿಚಾರದಲ್ಲಿ ಈಗಾಗಲೇ ಹೇಳಿದ್ದೇನೆ. ಆದುದರಿಂದ ಮಾನ್ಯ ಸದಸ್ಯರು ಏನೇನು ಅಭಿಪ್ರಾಯವನ್ನು ಸೂಚಿಸಿದ್ದಾರೆ ಅದರ ಬಗ್ಗೆ ನಾವು ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

ಸದಸ್ಯರುಗಳು — ಕ್ಲಾರಿಫಿಕೇಷನ್.....

ಅಧ್ಯಕ್ಷರು.—ಕ್ಲಾರಿಫಿಕೇಷನ್ ಬೇಡ ಎಂದು ತೀರ್ಮಾನವಾಗಿದೆ, ಆದುದರಿಂದ ಮಾನ್ಯ ಸದಸ್ಯರೇನಾದರೂ ಕೇಳುವ ಹಾಗಿದ್ದರೆ ಇವತ್ತು ಅವರ ಡಿಮ್ಯಾಂಡ್ ತೆಗೆದುಕೊಳ್ಳುತ್ತೇವೆ ಆಗ ಮಾನ್ಯ ಸದಸ್ಯರುಗಳು ಕೇಳಬಹುದು.

ಶ್ರೀ ಆರ್. ಎಸ್. ಪಾಟೀಲ್.—ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಅಧಿಕಾರಿಗಳಿಂದ ರಿಪೋರ್ಟ್ ತರಿಸಿಕೊಳ್ಳುತ್ತಿದ್ದೇವೆಂದು ಹೇಳುತ್ತಿದ್ದೀರಿ, ಅವರ ಬದಲು ತಾವೇ ಹೆಲಿಕ್ಯಾಪ್ಟರಿನಲ್ಲಿ ಹೋಗಿ ಅಲ್ಲೆಲ್ಲಾ ಎಷ್ಟೆಷ್ಟು ಹಾನಿಯಾಗಿದೆಯೆಂಬುದನ್ನು ಸರ್ವೆ ಮಾಡಿಕೊಂಡು ಬಂದು ಸೂಕ್ತ ಕ್ರಮ

ತೆಗೆದುಕೊಳ್ಳಬೇಕು. ಆಲ್ಲೆಲ್ಲಾ ನೀರು ನಿಂತಿರುವುದರಿಂದ ಜನಗಳಿಗೆ ಅದರಿಂದ ತುಂಬಾ ಹಾನಿಯಾಗಿದೆ, ಆದುದರಿಂದ ತಾವು ೨-೩ ಗಂಟೆಗಳ ಕಾಲ ಹೆಲಿಕ್ಯಾಪ್ಟರಿನಲ್ಲಿ ಸರ್ವೆ ಮಾಡಿದರೆ ತಮಗೇ ಗೊತ್ತಾಗುತ್ತದೆ. ಹಾಗೆ ಸರ್ವೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಿ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ ತಮ್ಮ ರಿಪೋರ್ಟಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಏನೂ ಆಗಿಲ್ಲವೆಂದು ಹೇಳಿದಿರಿ, ಆದರೆ ಅಲ್ಲಿ ಹೊಸನಗರ ತಾಲ್ಲೂಕ್‌ನಲ್ಲಿ ಸುಮಾರು ೧೮.೧೨ ಕೆರೆಗಳು ಒಡೆದು ಹೋಗಿರುವುದನ್ನು ನೋಡಿದ್ದೇನೆ. ಇದರಿಂದಾಗಿ ೧೫ ದಿವಸಗಳ ಕಾಲ ಬಸ್‌ಗಳು ನಿಂತು ಹೋಗಿದ್ದವು. ತುಂಬಾ ಡ್ಯಾಮೇಜ್ ಆಗಿದೆ. ತಮಗೆ ಆ ರೀತಿಯ ವರದಿ ಯಾರು ಕಳುಹಿಸಿದರು ? ಆ ವರದಿ ತಮಗೆ ಎಲ್ಲಿಂದ ಬಂತು ಎಂಬುದನ್ನು ತಿಳಿಸಿದರೆ ನಾನು ತಮಗೆ ಚಿರಋಣಿಯಾಗಿರುತ್ತೇನೆ.

ಶ್ರೀ ಯು. ಬಿ. ಬೋರ್ಕರ್.—ಮಾನ್ಯ ಮಂತ್ರಿಗಳು ಗೊಬ್ಬರ ಮತ್ತು ಬೀಜದ ವಿಚಾರಗಳನ್ನು ಹೇಳುತ್ತಿದ್ದರು. ನಮ್ಮ ಸಿರಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಬೀಜ ಸಿಗುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ, ಅಲ್ಲಿ ಬೀಜ ಇದೆ. ಅಲ್ಲಿನ ಜನರು ಏನು ಹೇಳಿದ್ದಾರೆಂದರೆ, ಬೀಜದ ವಿಷಯದಲ್ಲಿ ಯೋಚನೆ ಮಾಡುವುದು ಬೇಡ, ನಮಗೆ ಗೊಬ್ಬರ ಬೇಕು ಎಂದು ಹೇಳಿದ್ದಾರೆ. ಇನ್ನೂ ಹೆಚ್ಚಿಗೆ ಬೀಜ ಬೇಕೆಂದರೆ ಇದೆ. ಬೇಕಾದರೆ ವ್ಯವಸಾಯ ಇಲಾಖೆಯಲ್ಲಿ ಸ್ಟಾಕ್ ಇಡಿಸುತ್ತೇನೆಂದು ಹೇಳಿಬಂದಿದ್ದೇನೆ. ಮಾನ್ಯ ಚಂದ್ರಶೇಖರ್‌ರವರ ತಾಲ್ಲೂಕಿಗೆ ಹೋಗಬೇಕೆಂದು ಇದ್ದೆ. ಆದರೆ ಹೋಗಲಿಕ್ಕೆ ಆಗಲಿಲ್ಲ. ಅಲ್ಲಿಂದಲೂ ಕೂಡ ವರದಿಗಳು ಬರುತ್ತಿವೆ. ಅದೇ ರೀತಿ, ತೀರ್ಥಹಳ್ಳಿ, ಕಾರವಾರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಂದಲೂ ವರದಿಗಳು ಬರುತ್ತಿವೆ. ಅವುಗಳನ್ನೆಲ್ಲ ನಾನು ನೋಡುತ್ತೇನೆ.

ಶ್ರೀ ಡಿ. ಬಿ. ವೈಗಾಂವ್‌ಕರ್.—ನಮ್ಮಲ್ಲಿ ಇರತಕ್ಕ ಪಿ. ಡಬ್ಲ್ಯೂ. ಡಿ. ಮತ್ತು ಟಿ. ಡಿ. ಬಿ. ರಸ್ತೆಗಳು ಕೆಲವು ಕಡೆ ಡ್ಯಾಮೇಜ್ ಆಗಿವೆ. ಅವುಗಳ ರಿಪೇರಿ ಸಲುವಾಗಿ ಹಣ ಕೊಡುವ ವ್ಯವಸ್ಥೆ ಮಾಡಬೇಕು. ಕಾರವಾರ ಜಿಲ್ಲೆಯ ಮುಂಡಗೋಳ್‌ನಲ್ಲಿ ಸುಮಾರು ೮-೧೦ ಸಾವಿರ ಎಕರೆ ಭತ್ತದ ಭೂಮಿ ನಷ್ಟವಾಗಿದೆ. ಅಲ್ಲಿ ನಾಟಿ ಮಾಡುವುದಕ್ಕೆ ಬರುವುದಿಲ್ಲ. ಆದರೂ ಕೂಡ ಅದರ ಬಗ್ಗೆ ಏನು ಉಲ್ಲೇಖ ಮಾಡಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು, ನಾನು ಹೇಳಿದ್ದನ್ನು ಸಂಪೂರ್ಣವಾಗಿ ಫಾಲೋ ಮಾಡಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಮಳೆ ನೀರು ತುಂಬಿರುವ ಕಡೆ ಬೆಳೆ ತೆಗೆಯುವುದಕ್ಕೆ ಆಗುವುದಿಲ್ಲ. ಸಾವಿರಾರು ಎಕರೆ ಜಮೀನಿನಲ್ಲಿ ನೀರು ತುಂಬಿ ನಿಂತಿರುವುದನ್ನು ನೋಡಿ ಬಂದಿದ್ದೇನೆ. ಅಲ್ಲಿ ಯಾರಿಗೂ ಬೆಳೆ ತೆಗೆಯುವುದಕ್ಕಾಗುವುದಿಲ್ಲ. ಬೆಳೆ ತೆಗೆಯಬೇಕಾದರೆ ನೆರೆ ಹೋಗಬೇಕಾಗುತ್ತದೆ ಮತ್ತು ಪುನಃ ನೆರೆ ಬರಬಾರದು. ಈಗ ಆಗೆ ಹಾಕಿದರೆ ಅದೂ ಕೂಡ ಹುಟ್ಟುವುದಿಲ್ಲ. ನೀರು ಬಂದಿದೆಯಲ್ಲ, ಏನು ಹೇಳುತ್ತೀರೆಂದರೆ ಅದು ಹೋಗುವವರೆಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ನಿಮ್ಮ ಮತ್ತು ನಮ್ಮ ಜಿಲ್ಲೆಗಳೆಲ್ಲ ಒಂದೇ ರೀತಿ ಇವೆ. ಪಿ.ಡಬ್ಲ್ಯೂ.ಡಿ. ಮತ್ತು ಟಿ.ಡಿ.ಬಿ ಗೆ ಸೇರಿದ ರಸ್ತೆಗಳ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಸೇರಿದ ಕೆಲವು ಟ್ಯಾಂಕುಗಳು ಬ್ರೀಚ್ ಆಗಿವೆ. ಪಿ.ಡಬ್ಲ್ಯೂ.ಡಿ. ಮತ್ತು ಟಿ.ಡಿ.ಬಿ ಗೆ ಸೇರಿದ ರಸ್ತೆಗಳು ಮತ್ತು ಬಿಲ್ಡಿಂಗ್‌ಗಳು ಕೆಲವು ಬಿದ್ದುಹೋಗಿವೆ ಮತ್ತು ಕೆಲವು ಹಾಳಾಗಿ ಹೋಗಿವೆ. ಅವುಗಳನ್ನೆಲ್ಲ ನಾವು ಆಸೆಸ್ ಮಾಡುತ್ತಿದ್ದೇವೆ, ಇದರ ಮೇಲೆ ಬೇರೆ ವಿವರಗಳನ್ನು ಎಷ್ಟು ಕೇಳಿದರೂ ಪ್ರಯೋಜನವಿಲ್ಲ. ಆದ್ದರಿಂದ ಇಲ್ಲಿಗೆ ಸಾಕು ಮಾಡಿ. ಮತ್ತೆ ನಾನು ವಿವರಗಳನ್ನು ಕೊಟ್ಟಾಗ ಬೇಕಾದರೆ ಕೇಳಬಹುದು.

ಶ್ರೀ ಎಂ. ಸಿದ್ದಮಾದಯ್ಯ.—ನಮ್ಮ ಕೊಳ್ಳೇಗಾಲ ತಾಲ್ಲೂಕಿಗೆ ಮಾನ್ಯ ಕಂದಾಯ ಮಂತ್ರಿಗಳು ಬರಬೇಕಾಗಿತ್ತು, ಅವರು ಬಾರದೆ ಇರುವುದು ನಮಗೆ ಅನುಮಾನವಾಗಿದೆ. ವರದಿಯಲ್ಲಿ ಕೊಟ್ಟಿರುವುದು ೧೦ಳಳ ಎಕರೆಗೆ ಡ್ಯಾಮೇಜ್ ಆಗಿದೆ ಎಂದು, ಆದರೆ ನಾವೇ ಅಲ್ಲಿ ಹೋಗಿ ನೋಡಿದಾಗ ೨ ಸಾವಿರ ಎಕರೆಗೂ ಮೇಲೆ ಡ್ಯಾಮೇಜ್ ಆಗಿರುವುದು ಕಂಡುಬರುತ್ತದೆ.

ಅಧ್ಯಕ್ಷರು.—ನಾಳೆ ಕಂದಾಯ ಇಲಾಖೆಯ ಬೇಡಿಕೆ ಬರುತ್ತದೆ. ಆಗ ಬೇಕಾದರೆ ಭಾಗವಹಿಸಿ ಮಾತನಾಡಿ, ಈಗ ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಫ್. ಎಸ್. ತಾವರೆ.—ತುಂಗಭದ್ರದ ನದಿಯ ದಂಡೆಯಲ್ಲಿರತಕ್ಕ ರೈತರ ಸ್ಟಾರ್ಟರ್ ಸ್ವಿಚ್ ಬೋರ್ಡುಗಳೆಲ್ಲ ಪ್ರವಾಹದಲ್ಲಿ ತೇಲಿಹೋಗಿವೆ. ಈಗ ಅವುಗಳನ್ನು ಹಾಕಬೇಕಾದರೆ ಸುಮಾರು ಒಂದು ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ, ಸರ್ಕಾರದವರು ವಿದ್ಯುಚ್ಛಕ್ತಿ ಇಲಾಖೆಯ ಮುಖಾಂತರ ಸ್ಟಾರ್ಟರ್ ಮತ್ತು ಸ್ವಿಚ್ ಬೋರ್ಡುಗಳನ್ನು ಉಚಿತವಾಗಿ ಹಾಕಿಸಿಕೊಟ್ಟು ಮುಂದಿನ ಕೆಲಸಕ್ಕೆ ನೆರವು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

SRI M. C. NANAIAH.—Sir, I raise a point of order. I think the member shall not occupy the chair of the Leader of the House.

MR. SPEAKER.—Mr. Karibasavanagoud, will please appologise.

SRI N. KARIBASAVANAGOUD.—Mr. Speaker Sir, I beg the House to be excused for my mistake.

re :—(*ii*) *Employement Affirmation Scheme in Anekal Taluk.*

SRI M. VEERAPPA MOILY (Hon'ble Minister for Finance and Planning).—MR. Speaker Sir, I beg to make a statement regarding Employment Affiirmation Scheme in Anekal Taluk.

For the implementation of the Employment Affirmation Scheme in Anekal Taluk, which is one of the 99 taluks where the Scheme is in operation during the current year, a comprehensive programme with an outlay of Rs. 77.32 lakhs spread over 2 years (two slack agricultural seasons) had been prepared after ascertaining the programmes that could be taken up by implementing agencies like Public Works Department, Sericulture Department, Horticulture Department, Agriculture Department and the Taluk Development Board. Out of this outlay, about Rs. 62.50 lakhs were shown for the Taluk Development Board.

2. A preliminary meeting of all Village Panchayats Chairman and Secretaries, Agricultural assistants and Extension Officers was convened as early as 28-2-1980 to discuss and propose works to be taken up under the Scheme during the slack agricultural season spread over 1979-80 and 1980-81 in Anekal Taluk. The Taluk Development Board meetings were also held twice for discussion and finalisation of the schemes.

3. Subsequently, the Taluk Level Committee constituted for the purpose also discussed the draft plan and finalised the blue print of works. In this context, it may be mentioned that most of the village Panchayats in the taluk were involved in the Scheme. Some village Panchayats, which did not show any interest may have been left out of the scheme. Thus, the benefits of the scheme were planned to reach most of the villages in the taluk.

4. The blue prints of works under various categories were discussed in detail in the District Level Committee which met on